1 ನೇ ಹೆಚ್ಚುವರಿ ಹಿರಿಯ  ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.1750/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ ಯಾನೆ ಮಂಜುನಾಥ ರಾಮ ಮಡ್ಗಾವ್‌ಕರ್ |
| ತಂದೆಯ/ಗಂಡನ ಹೆಸರು | : | ರಾಮ ಮಡ್ಗಾವ್‌ಕರ್ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ವೆಲ್ಡಿಂಗ್ ಕೆಲಸ |
| ವಾಸಃ | : | ಶಿರಸಿ |

ಸಿ ಡಬ್ಲ್ಯೂ-2 ಪಿ.ಡಬ್ಲ್ಯೂ-2

ದಿನಾಂಕ  25.11.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ದಿಃ07.06.2023 ರಂದು ಮಣಿಕಂಠ ಸಾಗರಕ್ಕೆ ಕೆಲಸಕ್ಕೆ ಹೋಗೋಣ ಎಂದು ಹೇಳಿರುತ್ತಾರೆ. ನಾನು ಬರುತ್ತೇನೆ ಎಂದು ಒಪ್ಪಿಕೊಂಡಿರುತ್ತೇನೆ. ನನ್ನ ಸ್ನೇಹಿತನಿಂದ ಮಣಿಕಂಠ ರವರು ಸುಜುಕಿ ಜಿಕ್ಸರ್ ಬೈಕ್ ನಂ ಕೆ ಎ 19 ಇಎಕ್ಸ್ 2770 ಅನ್ನು ಪಡೆದುಕೊಂಡಿರುತ್ತಾನೆ. ಮಣಿಕಂಠ ಸಂಜೆ 5 ಗಂಟೆಗೆ ಬೈಕನ್ನು ಚಲಾಯಿಸಿಕೊಂಡು ನನ್ನನ್ನು ಕೂರಿಸಿಕೊಂಡು ಹೊರಟಿರುತ್ತೇವೆ. ಅನಂತರ ನಾನು ಬೈಕನ್ನು ಚಲಾಯಿಸಿಕೊಂಡು ಮಣಿಕಂಠ ರವರು ಕೂರಿಸಿಕೊಂಡು ಶಿರಸಿಯಿಂದ ಸಾಗರಕ್ಕೆ ಹೊರೆಟವು. ಸುಮಾರು ಸಂಜೆ 7.30 ರಿಂದ 8.30 ಗಂಟೆಗೆ ಕಾನಲೆ ಕ್ರಾಸ್ ಬಳಿ ಎಡಭಾಗದಲ್ಲಿ ನಾನು ಬೈಕನ್ನು ಚಲಾಯಿಸುತ್ತಿದ್ದಾಗ ಎದುರುಭಾಗದಿಂದ ಒಂದು ಬೈಕ್ ಬರುತ್ತಿತ್ತು. ಅದರ ನಂಬರ್ ನನಗೆ ನೆನಪಿರುವುದಿಲ್ಲ. ಸದರಿ ಬೈಕ್ ಎದುರುಗಡೆಯಿಂದ ಅತಿವೇಗವಾಗಿ ಬಲಭಾಗಕ್ಕೆ ಬಂದು ನನ್ನ ಬೈಕಿಗೆ ಡಿಕ್ಕಿ ಹೊಡೆಸಿರುತ್ತದೆ. ಡಿಕ್ಕಿಯಾದ ಪರಿಣಾಮ ಮಣಿಕಂಠ ರವರ ತಲೆಗೆ ಹಾಗೂ ಕಾಲಿಗೆ ಪೆಟ್ಟು ಬಿದ್ದು ಅವರು ಸ್ಥಳದಲ್ಲೆ ಮೃತಪಟ್ಟರು. ನನ್ನ ಮುಖಕ್ಕೆ, ಕುತ್ತಿಗೆ ಕೆಳಗೆ ಹಾಗೂ ಮಣಕಾಲಿಗೆ, ಭುಜಕ್ಕೆ ಪೆಟ್ಟಾಗಿರುತ್ತದೆ. ಅನಂತರ ಜನ ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಬಂದರು. ನನ್ನನ್ನು

ಸಾಗರದ ಆಸ್ಪತ್ರೆಗೆ ಕರೆದುಕೊಂಡುಬಂದಾಗ ನನಗೆ ಎಚ್ಚರ ಇರಲಿಲ್ಲ. ಅಲ್ಲಿಂದ ನನ್ನನ್ನು ಮೆಗ್ಗಾನ ಆಸ್ಪತ್ರೆಗೆ ಕರೆದುಕೊಂಡು ಬಂದರು.

ನ್ಯಾಯಾಲಯದ ಮುಂದಿರುವಂತಹ ಆರೋಪಿ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಆತನೇ ಆ ದಿನ ಅಪಘಾತ ಮಾಡಿರುವುದು ಎಂದು ನುಡಿಯುತ್ತಾರೆ. ನಿಪಿ-4 ಮತ್ತು 5 ಅಪಘಾತ ನಡೆದ ಸ್ಥಳ. ನಿಪಿ-8 ಮತ್ತು 9 ರಲ್ಲಿ ಅಪಘಾತ ಪಡೆಸಿದ ಹಾಗೂ ಅಪಘಾತಕ್ಕೆ ಒಳಗಾದ ವಾಹನಗಳು ಇವೆ ಎಂದು ಸಾಕ್ಷಿ ಗುರುತಿಸಿರುತ್ತಾರೆ.

( ಸಾಕ್ಷಿಯನ್ನು ಸರ್ಕಾರಿ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಸ.ಸ.ಅ ರವರಿಂದಃ</u>

ಅಪಘಾತ ಪಡಿಸಿದ ಬೈಕ್ ನಂ ಕೆಎ 31 ಇಡಿ 7133 ಎಂದರೆ ಸರಿ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಎಂ ಆರ್ ರವರಿಂದಃ</u>

ನಾನು ಪ್ರತಿನಿತ್ಯ ಸಾಗರಕ್ಕೆ ಬರುತ್ತಿರಲಿಲ್ಲ ಕೇವಲ ಮಣಿಕಂಠರವರು ಮಾತ್ರ ಬರುತ್ತಿದ್ದರು. ಮಣಿಕಂಠ ರವರು ದಿನನಿತ್ಯ ಅವರ ಬೈಕ್ ನಲ್ಲಿ ಬರುತ್ತಾರೆ. ಮಣಿಕಂಠ ರವರ ಬೈಕ್ ಯಾವುದು ಎಂದು ನನಗೆ ಗೊತ್ತಿರುವುದಿಲ್ಲ. ಕೆಎ 19 ಇಎಕ್ಸ್ 2770 ಬೈಕ್ ನ ಮಾಲೀಕರು ನನ್ನ ಸ್ನೇಹಿತರಲ್ಲ. ಆತ ಮಣಿಕಂಠ ರವರ ಸ್ನೇಹಿತ ಆತನ ಹೆಸರು ನನಗೆ ಗೊತ್ತಿರುವುದಿಲ್ಲ. ವಾನಹಳ್ಳಿಗೂ ಮಣಿಕಂಠರವರ ಊರಿಗೂ ಎಷ್ಟು ದೂರ ಇದೆ ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಆದ ಬೈಕ್ ಮಣಿಕಂಠರವರ ಹತ್ತಿರ ಇತ್ತು. ಮಣಿಕಂಠ ರವರು ಅದನ್ನು ಖರೀದಿ ಮಾಡಿದ್ದರು ಆದರೆ ಮಣಿಕಂಠ ರವರ ಹೆಸರಿಗೆ ಬದಲಾವಣೆ ಆಗಿರಲಿಲ್ಲ. ಖರೀದಿ ಮಾಡಿದ ಬಗ್ಗೆ ದಾಖಲಾತಿಯನ್ನು ಪೋಲೀಸರಿಗೆ ನೀಡಿರುತ್ತಾರೋ ಇಲ್ಲವೂ ನನಗೆ ಗೊತ್ತಿರುವುದಿಲ್ಲ. ಮಣಿಕಂಠರವರ ಮನೆ ಹಾಗೂ ನಮ್ಮ ಮನೆ ಒಂದೇ ಏರಿಯಾ ಆಗಿರುತ್ತದೆ. ಮಣಿಕಂಠ ನಮ್ಮ ಮನೆಗೆ ಬಂದು ನನ್ನನ್ನು ಕರೆದುಕೊಂಡು ಹೋದಾಗ ಸಮಯ ಎಷ್ಟು ಆಗಿತ್ತು ಎಂದು ನನಗೆ ನೆನಪರುವುದಿಲ್ಲ. ಅಪಘಾತ ಆದ ದಿನ ಯಾವ ವಾರ ಎಂದು ನನಗೆ ನೆನಪರುವುದಿಲ್ಲ. ಸಾಕ್ಷಿ ಮುಂದುವರೆದು 7 ನೇ ತಾರೀಖು

ಎಂದು ನನಗೆ ಸರಿಯಾಗಿ ನೆನಪಿದೆ ಎಂದು ಉತ್ತರಿಸುತ್ತಾರೆ.

ಶಿರಸಿ ಯಲ್ಲಾಪುರ ರಸ್ತೆಯಲ್ಲಿ ನಾನು ಕೆಲಸ ಮಾಡುವ ವೆಲ್ಡಿಂಗ್ ಶಾಪ್ ಇದೆ. ಮಣಿಕಂಠ ರವರು ನಗರ ಸಭೆ ಕಾಂಟ್ರಾಕ್ಟರ್ ಕೆಳಗೆ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದರು ಅವರು ನಿರ್ದಿಷ್ಟವಾಗಿ ಎಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಬೈಕ್ ಮಾಲೀಕರು ನನಗೆ ಪರಿಚಯ ಇರುವುದಿಲ್ಲ. ಮಣಿಕಂಠರವರ ಬಳಿ ಚಾಲನಾ ಪರವಾನಿಗೆ ಇತ್ತೋ ಇಲ್ಲವೊ ಗೊತ್ತಿಲ್ಲ. ಆದರೆ ಆತನಿಗೆ ವಾಹನ ಚಾಲನೆ ಬರುತ್ತಿತ್ತು. ನಾನು ಹೆಲ್ಮೆಟ್ ಹಾಕಿದ್ದೆ. ಸಿದ್ದಾಪುರದಲ್ಲಿ ಅರ್ದ ಗಂಟೆ ಇದ್ದೆವು. ಅಲ್ಲಿಂದ ಬೈಕನ್ನು ನಾನೇ ಚಲಾಯಿಸಿಕೋಂಡು ಸಾಗರದ ಕಡೆಗೆ ಹೋಗಿರುತ್ತೇನೆ.

ಅಪಘಾತವಾದ ಸ್ಥಳ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ರಸ್ತೆಯ ಅಗಲ ನನಗೆ ಹೇಳಲು ಆಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಆಗಿದ್ದರಿಂದ ರಸ್ತೆ ಅಗಲ ಆಗಿರುತ್ತದೆ ಎಂದರೆ ಸರಿ. ಹಾಗೂ ವಾಹನಗಳು ಹೆಚ್ಚಾಗಿ ಓಡಾಡುತ್ತವೆ ಎಂದರೆ ಸರಿ. ನಾನು 50 ಕಿ.ಮಿ ವೇಗದಲ್ಲಿ ಬೈಕ್ ಚಲಾಯಿಸುತ್ತಿದ್ದೆ. ಕಾನಲೇ ಇಂದ ಒಂದು ರಸ್ತೆ ಬಂದು ಕೂಡುತ್ತದೆ ಎಂದರೆ ಸರಿ. ಕಾನಲೆಯಿಂದಲೂ ವಾಹನಗಳೂ ಬರುತ್ತವೆ ಎಂದರೆ ನಾನು ನೋಡಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ಬಿಡುವು ಇದ್ದುದರಿಂದ ಏನು ಕೆಲಸ ಎಂದುಕೇಳಲಿಲ್ಲ ಮಣಿಕಂಠ ಕರೆದಾಗ ನಾನು ಅವನೊಂದಿಗೆ ಹೊರಟೆ. ಸಾಗರದಿಂದ ಶಿರಸಿಗೆ ಅಂದಾಜು ಎಷ್ಟು ಕಿ.ಮಿ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಗರದಿಂದ ಶಿರಸಿಗೆ ಅಂದಾಜು 80 ಕಿ.ಮಿ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಮನೆ ಶಿರಸಿಯ ಸಿಟಿಯಲ್ಲೇ ಬರುತ್ತದೆ. ಕಾನಲೇ ಕ್ರಾಸ್ ನಿಂದ ಬರುವಾಗ ನಮ್ಮ ಹಿಂದೆ ಮುಂದೆ ವಾಹನಗಳು ಬರುತ್ತಿದ್ದವೂ ಇಲ್ಲವೂ ನಾನು ಗಮನಿಸಿರುವುದಿಲ್ಲ.

ರಾತ್ರಿ 8.30 ಆಗಿದ್ದರಿಂದ ಎದುರುಗಡೆಯಿಂದ ವಾಹನಗಳು ಹೇಗೆ ಬರುತ್ತವೆ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ಬೆಳಕು ಕಣ್ಣಿಗೆ ಕುಕ್ಕುತ್ತದೆ ಎಂದರೆ ಸರಿ. ಅಪಘಾತ ಆದ ಸ್ಥಳದಲ್ಲಿ ಬೀದಿ ದೀಪ ಇರಲಿಲ್ಲ. ಕಾಲನೆ ರಸ್ತೆ ಸಿದ್ದಾಪುರದಿಂದ ಬರುವಾಗ ಎಡಭಾಗಕ್ಕೆ ಸಿಗುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ಬ್ರೇಕ್ ಹಾಕಿರುತ್ತೇನೆ. ನಾನು

ಬ್ರೆಕ್ ಹಾಕಿದ ಸಂದರ್ಬದಲ್ಲಿ ಹಿಂದೆ ಯಾವುದೇ ವಾಹನ ಇರಲಿಲ್ಲ. ಮುಂದೆ ಅಪಘಾತ ಪಡಿಸಿದ ವಾಹನ ಹೊರತುಪಡಿಸಿ ಬೇರೆ ಯಾವುದೇ ವಾಹನ ಇರಲಿಲ್ಲ .

ಅಪಘಾತ ಆದ ಸ್ಥಳ ನೇರವಾಗಿದೆ ಎಂದರೆ ಸರಿ. ಎದುರುಗಡೆ ಬರುತ್ತಿದ್ದ ಬೈಕ್ ಅನ್ನು ನಾನು ಅಂದಾಜು 100 ಅಡಿ ಅಂತರದಿಂದ ನೋಡಿರುತ್ತೇನೆ. ಎದುರುಗಡೆ ಬರುತ್ತಿದ್ದ ಬೈಕ್ ಹತ್ತಿರ ಬಂದ ಬಳಿಕ ಬಲಭಾಗಕ್ಕೆ ಬಂದಿರುತ್ತದೆ. ಅಪಘಾತ ಪಡಿಸಬೇಕೆ ಎಂದು ಬಲಭಾಗಕ್ಕೆ ತಿರುಗಿದರೇ ಎಂದರೆ ಸಾಕ್ಷಿ ಅವರ ಉದ್ದೇಶ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಎದುರುಗಡೆ ಬರುತ್ತಿದ್ದ ಬೈಕ್ ಅಂದಾಜು 10 ಅಡಿ ಅಂತರದಲ್ಲಿರುವಾಗ ನಾನು ಬ್ರೇಕ್ ಹಾಕಿರುತ್ತೇನೆ. ಎದುರುಗಡೆ ಬರುತ್ತಿದ್ದ ಬೈಕ್ ಚಾಲಕ ಬ್ರೆಕ್ ಹಾಕಿದರೋ ಇಲ್ಲವೂ ಗೊತ್ತೀಲ್ಲ, ಸಾಮಾನ್ಯವಾಗಿ ತಕ್ಷಣ ಬ್ರೇಕ್ ಹಾಕಿದರೆ ಬೈಕ್ ಸ್ಕಿಡ್ ಆಗುತ್ತದೆ ಎಂದರೆ ಸಾಕ್ಷಿ ಕೇವಲ ಸ್ಪೋರ್ಟ್ಸ್ ಬೈಕ್ ಮಾತ್ರ ಸ್ಕಿಡ್ ಆಗುತ್ತದೆ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಸ್ಪೋರ್ಟ್ಸ್ ಬೈಕ್ ಬ್ರೆಕ್ ಹಾಕಿದ ಕೂಡಲೇ ನಿಲ್ಲುತ್ತದೆ ಎಂದರೆ ಸರಿ. ಅಪಘಾತ ಆದ ಸಮಯದಲ್ಲಿ ನನಗೆ ಪ್ರಜ್ಞೆ ಇದ್ದಾಗ ನಾನು ನನ್ನ ಸೆಲ್ಫಿ ತೆಗೆದುಕೊಂಡಿರುತ್ತೇನೆ ಅದರ ಸಮಯ ರಾತ್ರಿ 8.14 ಆಗಿತ್ತು. ಬ್ರೆಕ್ ಹಾಕಿದಾಗ ಮಣಿಕಂಠ ಬೀಳಲಿಲ್ಲ. ರಸ್ತೆಯ ಅಂಚಿನಲ್ಲಿರುವ ಬಿಳಿ ಗೆರೆ ಹತ್ತಿರ ನಮ್ಮ ಬೈಕ್ ಚಲಾಯಿಸುತ್ತಿತ್ತು. ಬ್ರೆಕ್ ಹಾಕಿದಾಗ ಟೈಯರ್ ಮಾರ್ಕ ಇತ್ತೇ ಎಂದರೆ ಸಾಕ್ಷಿ ನಾನು ಅಪಘಾತ ಆದ ಒಂದು ವರ್ಷದ ಬಳಿಕ ಸ್ಥಳಕ್ಕೆ ಹೋಗಿದ್ದು ಎಂದು ಉತ್ತರಿಸುತ್ತಾರೆ.

ಬೈಕು ಬೈಕು ಮುಖಾಮುಖಿ ಆಗಿ ಅಪಘಾತ ಆದಾಗ ಅದನ್ನು ಚಲಾಯಿಸುತ್ತಿದ್ದ ಸವಾರರಿಗೆ ಹೆಚ್ಚಿನ ಅಪಘಾತ ಆಗುತ್ತದೆ ಎಂದರೆ ಸರಿ. ಎರಡೂ ಬದಿಯ ಬೈಕ್ ಅತಿವೇಗದಿಂದ ಇದ್ದಲ್ಲಿ ಮಾತ್ರ ಜಾಸ್ತಿ ಪ್ರಮಾಣದ ಅಪಘಾತ ಆಗುತ್ತದೆ ಎಂದರೆ ಸರಿಯಲ್ಲ. ಅಪಘಾತ ಆದಾಗ ನನಗೆ ಪ್ರಜ್ಞೆ ಇರಲಿಲ್ಲ. ಸ್ಥಳದಲ್ಲಿ ನನಗೆ ಎಚ್ಚರ ಆದಾಗ ನಾನು ಸೆಲ್ಫಿ ತೆಗೆದುಕೊಂಡಿದ್ದೆ. ಅಪಘಾತದ ಚಿತ್ರಣವನ್ನು ನಾನು ವಿಡಿಯೋ ಅಥವಾ ಫೋಟೋ ತೆಗೆದಿರುವುದಿಲ್ಲ. ನನಗೆ 1 ರಿಂದ 2 ನಿಮಿಷ ಪ್ರಜ್ಞೆ ಇತ್ತು ಅನಂತರ ಪ್ರಜ್ಞೆ ಹೋಗಿರುತ್ತದೆ. ಅಪಘಾತ ಆದ ಸಮಯದಲ್ಲಿ ನನಗೆ ಯಾರು ಅಪಘಾತ ಪಡಿಸಿದರು ಎಂದು ನಾನು ನೋಡಿರುತ್ತೇನೆ. ನಾನು ಅಪಘಾತ ಆದಾಗ ಆಂಬುಲೆನ್ಸಗೆ ಕಾಲ್ ಮಾಡಿರುವುದಿಲ್ಲ. ಯಾರು ಕಾಲ್ ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಆದ

ಸಂದರ್ಭದಲ್ಲಿ ಯಾರು ಸೇರಿದ್ದರು ಎಷ್ಟು ಜನ ಸೇರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಆಂಬುಲೆನ್ಸ್ ಅಲ್ಲಿ ನನ್ನನ್ನು ಹಾಕುವಾಗ ನನಗೆ ಪ್ರಜ್ಞೆ ಇರಲಿಲ್ಲ. ಸಾಗರದ ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಬಂದಿರುವುದಿಲ್ಲ. ಅನಂತಪುರದಲ್ಲಿ ಅಂಬುಲೆನ್ಸನಲ್ಲಿ ಹೋಗುವಾಗ ನನಗೆ ಪ್ರಜ್ಞೆ ಬಂದಿರುತ್ತದೆ. ಮ್ಯಾಕ್ಸ್ ಆಸ್ಪತ್ರೆಯಲ್ಲಿ ಸ್ವಲ್ಪ ಎಚ್ಚರ ಆಗಿತ್ತು. ಅನಂತರ ಮೆಗ್ಗಾನ್ ಆಸ್ಪತ್ರೆಯಲ್ಲೇ ನನಗೆ ಬೆಳಗ್ಗೆ ಎಚ್ಚರ ಆಗಿರುತ್ತದೆ.

ನಾನು ಅಪಘಾತದ ಆದ ಬಗ್ಗೆ ಚಾಸಾ-1 ರವರಿಗೆ ತಿಳಿಸಿರುವುದಿಲ್ಲ. ನನಗೆ ಅಪಘಾತವಾಗಿ ಎಚ್ಚರವಾದ ಮೇಲೆ ಮಣಿಕಂಠ ರವರನ್ನು ನಾನು ಎಬ್ಬಿಸಿರುವುದಿಲ್ಲ. ಸಾಕ್ಷಿ ಮುಂದುವರದು ನನಗೆ ಎಳಲು ಆಗುತ್ತಿರಲಿಲ್ಲ ಹಾಗೂ ನಾನು ಅಲ್ಲೇ ಇದ್ದವರನ್ನು ಕೇಳಿದಾಗ ಆತ ಬದುಕಿದ್ದಾನೆ ಎಂದು ಹೇಳಿದರು. ಅಪಘಾತ ಆದ ತಕ್ಷಣ ನನಗೆ ಪ್ರಜ್ಞೆ ಹೋಗಿರುತ್ತದೆ. ಮಣಿಕಂಠ ಎಷ್ಟು ದೂರದಲ್ಲಿ ಬಿದ್ದನು ಎಂದು ನನಗೆ ನೊಡಲು ಆಗಿರಲಿಲ್ಲ.

ನಾನೇ ಅತೀವೇಗ ಹಾಗೂ ಅಜಾಗರೂಕತೆಯಿಂದ ಬೈಕ್ ಅನ್ನು ಚಾಲನೆಮಾಡಿಕೊಂಡು ಹೋಗಿ ನಾವೇ ಬಿದ್ದು, ವಿಮಾ ಹಣವನ್ನು ಪಡೆಯುವ ಉದ್ದೇಶದಿಂದ ಆರೋಪಿಯ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದೆರ ಸರಿಯಲ್ಲ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದೆರ ಸರಿಯಲ್ಲ. ಆರೋಪಿಗೂ ಹಾಗೂ ಈ ಅಪಘಾತಕ್ಕೂ ಯಾವುದೇ ಸಂಬದ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.1750/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರೇಮಾ |
| ತಂದೆಯ/ಗಂಡನ ಹೆಸರು | : | ಶಾಂತಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಏನೂ ಇಲ್ಲ |
| ವಾಸಃ | : | ಶಿರಸಿ |

ಸಿ ಡಬ್ಲ್ಯೂ-1 ಪಿ.ಡಬ್ಲ್ಯೂ-1

ದಿನಾಂಕ 25.11.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ

ನನ್ನ ಮಗ ಮಣಿಕಂಠ. ಸೂಪರ್ವೈಸರ್ ಕೆಲಸ ಮಾಡುತ್ತಿದ್ದ. ಅವನಿಗೆ 23 ವರ್ಷ ವಯಸ್ಸು. ಅವರು ಶಿರಸಿಯಿಂದ ಸಾಗರಕ್ಕೆ ಕೆಲಸದ ನಿಮಿತ್ತ ಚಾಸಾ-2 ರವರ ಜೊತೆ ಬೈಕಿನಲ್ಲಿ ಬರುತ್ತಿದ್ದರು. ಚಾಸಾ-2 ರವರೇ ಬೈಕನ್ನು ಚಲಾಯುಸುತಿದ್ದರು. ದಿಃ07.6.2023 ರಂದು ಸುಮಾರು ಸಂಜೆ 7 ಗಂಟೆಗೆ ಕಾನಲೇ ಕ್ರಾಸ್ ನಲ್ಲಿ ಅತಿವೇಗವಾಗಿ ಎದುರುಗಡೆ ಗಾಡಿಯವರಾದ ಆರೋಪಿಯು ಅಪಘಾತ ಪಡಿಸಿರುತ್ತಾರೆ. ಬೈಕಿಗೆ ಡಿಕ್ಕಿ ಪಡಿಸಿದ ಪರಿಣಾಮ ನನ್ನ ಮಗ ಸ್ಥಳದಲ್ಲೇ ಮೃತಪಟಿಟರುತ್ತಾರೆ. ನನ್ನ ಮಗನ ತಲೆ ಮತ್ತು ಕಾಲಿಗೆ ಪೆಟ್ಟಾಗಿರುತ್ತದೆ. ಚಾಸಾ-2 ರವರಿಗೆ ಕೆನ್ನೆ, ಕೈಗೆ ಮತ್ತು ಮುಖಕ್ಕೆ ಪೆಟ್ಟಾಗಿರುತ್ತದೆ. ಅದಾದನಂತರ ಅವರನ್ನು ಶಿವಮೊಗ್ಗದ ಮೆಗ್ಗಾನ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅಪಘಾತ ಆದ ವಿಚಾರವು ನನಗೆ ಪೋನ್ ಮುಖಾಂತರ ತಿಳಿದಿರುತ್ತದೆ. ಅಪಘಾತ ಆದ ಸಮಯದಲ್ಲಿ ನಾನು ಶಿರಸಿಯಲ್ಲಿದ್ದೆ.

ಅಪಘಾತದ ವಿಚಾರ ತಿಳಿದ ನಂತರ ನಾನು ಆಸ್ಪತ್ರೆಗೆ ಬಂದಿರುತ್ತೇನೆ. ಅಲ್ಲಿ ನನ್ನ ಮಗನ ಮೃತ ದೇಹ ಇತ್ತು. ಪೊಲೀಸರ ಮಂದೆ ನಾನು ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ

ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಶಾನೆ ಪಿ 1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಶಾನೆ ಪಿ 1(ಎ) ಎಂದು ಗುರುತಿಸಲಾಯಿತು. ಅಪಘಾತ ಅದ ಮಾರನೇ ದಿನ ಅಂದರೆ ದಿಃ08.06.2023 ರಂದು ಕಾನಲೆ ಕ್ರಾಸ್ ಹತ್ತಿರ ಪೊಲೀಸರು ಪಂಚನಾ ಿಮಯನ್ನು ಮಾಡಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಸಾಕ್ಷಿ 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-4 ಮತ್ತು 5 ಎಂದು, ಅದಕ್ಕೆ ಸಂಬಂದಪಟ್ಟ ಸಿಡಿಯನ್ನು ನಿಪಿ-6 ಎಂದು ಗುರುತಿಸಲಾಯಿತು. ಅದೇ ದಿನ ಬೈಕ್ ಅಮಾನತುತ ಪಚಂನಾಮೆಯನ್ನು ಪೊಲೀಸ್ ಠಾಣೆಯಲ್ಲಿ ಜರುಗಿಸಿದ್ದು ಸದರಿ ಅಮಾನತ್ತು ಪಂಚನಾಮೇಯನ್ನು ನಿಪಿ-7 ಎಂದು, ಆ ಸಮಯದಲ್ಲಿ ತೆಗೆದ ಸಾಕ್ಷಿ 2 ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-8 ಮತ್ತು 9 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವಂತಹ ಆರೋಪಿ ಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

( ಸಾಕ್ಷಿಯನ್ನು ಸರ್ಕಾರಿ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲು ಸ.ಸ.ಅ ರವರಿಂದಃ

ಆದಿನ ನನ್ನ ಮಗ ಮತ್ತು ಚಾಸಾ-2 ರವರು ಇದ್ದಂತಹ ಬೈಕ್ ನಂ ಕೆ ಎ 19 ಇ ಎಕ್ಸ್ 2770 ಆಗಿತ್ತು ಎಂದರೆ ಸರಿ. ಅಪಘಾತ ಪಡಿಸಿದ ಬೈಕ್ ನಂ ಕೆಎ 31 ಇಡಿ 7133 ಆಗಿತ್ತು ಎಂದರೆ ಸರಿ.

ಪಾಟೀ ಸವಾಲು ಆರೋಪಿ ಪರ ಶ್ರೀ ಡಿ ಎಂ ಆರ್ ರವರಿಂದಃ

ನನಗೆ ಅಪಘಾತದ ವಿಚಾರ ಅಂದಾಜು ಸಂಜೆ 7 ಗಂಟೆಗೆ ತಿಳಿದಿರುತ್ತದೆ. ಅಪಘಾತ ಆದ ವಿಚಾರವನ್ನು ಯಾರು ನನಗೆ ಪೋನ್ ಮುಖಾಂತರ ತಿಳಿಸಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಸಾಗರಕ್ಕೆ ಬಂದಾಗ ರಾತ್ರಿಯಾಗಿತ್ತು. ಖಾಸಗಿ ವಾಹನದಲ್ಲಿ ಬಂದಿರುತ್ತೇನೆ. ನಾನು ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ. ನನ್ನ ಮಗ ದಿನ ಕೆ ಲಸ ಮುಗಿಸಿ ಮನೆಗೆ ಸಂಜೆ 6 ರಿಂದ 7 ಗಂಟೆ

ಸುಮಾರಿಗೆ ಬರುತ್ತಿದ್ದರು. ನನ್ನ ಮಗ ಅವನ ಸ್ವಂತ ಬೈಕಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದನು. ದಿನಾ ನನ್ನ ಮಗನೇ ಬೈಕನ್ನು ಚಲಾಯುಸುತ್ತಿದ್ದನು. ಸಾಕ್ಷಿ ಮುಂದುವರೆದು ಆ ದಿನ ಆತನ ಸ್ನೇಹಿತನಾದ ಚಾಸಾ-2 ರವರ ಜೊತೆ ಬರುತ್ತಿದ್ದ. ನಮ್ಮ ಮನೆ ಹಾಗೂ ಚಾಸ-2 ರವರ ಮನೆ ಅಕ್ಕ ಪಕ್ಕ ಇರುತ್ತದೆ. ಬೆಳಗ್ಗೆ ಚಾಸ-2 ಮತ್ತು ನನ್ನ ಮಗ ಒಟ್ಟಿಗೆ ಬೈಕಿನಲ್ಲಿ ಹೋಗಿರುತ್ತಾರೆ.

ನಿಪಿ-1 ಅನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಬರೆದವರು ಪೋಲೀಸರು. ಆ ಸಂದರ್ಬದಲ್ಲಿ ನಾನು ಮತ್ತು ನನ್ನ ಮಗಳು ಹಾಗೂ ಊರಿನವರು ಪೋಲೀಸ್ ಠಾಣೆಗೆ ಹೋಗಿದ್ದೆವು. ದೂರು ಕೊಟ್ಟ ಬಳಿಕ ಆಸ್ಪತ್ರೆಗೆ ಹೋಗಿರುತ್ತೇವೆ. ನನಗೆ ಆರೋಪಿಯೇ ಅಪಘಾತ ಪಡಿಸಿದ್ದು ಎಂದು ಪೋಲೀಸರು ತೋರಿಸಿರುತ್ತಾರೆ. ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಆರೋಪಿಯನ್ನು ತೋರಿಸಿದ್ದರಿಂದ ಅತನ ವಿರುದ್ಧ ಪ್ರಕರಣ ದಾಖಲಲು ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಗನ ಜೊತೆ ಚಾಸಾ-2 ರವರು ಇದ್ದರು ಎಂದು ಉತ್ತರಿಸುತ್ತಾರೆ. ಸಾಕ್ಷಿ ಪುನಃ ಮುಂದುವರೆದು ಎಲ್ಲಾ ಸತ್ಯ ಚಾಸಾ-2 ರವರಿಗೂ ಗೊತ್ತಿದೆ ಎಂದು ಉತ್ತರಿಸುತ್ತಾರೆ.

ಆರೋಪಿ ಅತಿವೇಗವಾಗಿ ಚಾಲನೆ ಮಾಡಿಕೊಂಡು ಬಂದಿರುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಪೊಲೀಸರು ಹಾಗೂ ಚಾಸ-2 ರವರು ಹೇಳಿರುವುದನ್ನು ನಾನು ನುಡಿದಿರುತ್ತೇನೆ.

ಅಪಘಾತ ನಡೆಯಿತು ಎನ್ನಲಾದ ಸ್ಥಳ ರಾಷ್ಟ್ರೀಯ ಹೆದ್ದಾರಿ ಹಾಗೂ ಅಲ್ಲಿ ಅತಿ ಹೆಚ್ಚು ವಾಹನಗಳು ಒಡಾಡುತ್ತವೆ ಎಂದರೆ ಸರಿ. ಅಪಘಾತ ನಡೆಯಿತು ಎನ್ನಲಾದ ಸ್ಥಳದಲ್ಲಿ ಎರಡು ರಸ್ತೆ ಕೂಡುತ್ತದೆ ಎಂದರೆ ಸರಿ. ನನ್ನ ಮಗ ಅಪಘಾತ ಆಯಿತು ಎನ್ನಲಾದ ದಿನ ಹೆಲ್ಮೆಟ್ ಅನ್ನು ಹಾಕಿದ್ದರೋ ಇಲ್ಲವೂ ನನಗೆ ಗೊತ್ತಿರುವುದಿಲ್ಲ.

ಅಪಘಾತ ಆದ ದಿನದ ಮಾರನೇ ದಿನ ಬೆಳಗ್ಗೆ ಪೊಲೀಸರ ಮುಂದೆ ನಾನು ಹೇಳಿಕೆಯನ್ನು ನೀಡಿರುತ್ತೇನೆ. ನಾನು ಪೊಲೀಸರ ಮುಂದೆ ದೂರ ಮತ್ತು ಮಹಜರ್ ಅನ್ನು ಹೊರತುಪಡಿಸಿ ಅಪಘಾತದ ಬಗ್ಗೆ ಬೇರೆ ಹೇಳಿಕೆ ನೀಡಿರುವುದಿಲ್ಲ. ಪೊಲೀಸರು ಪಂಚನಾಮೆಗೆ ಬರಲು ಫೋನ್ ಮಾಡಿರುತ್ತಾರೆ. ಪೊಲೀಸರ ಹೆಸರು ನನಗೆ

ಗೊತ್ತಿರುವುದಿಲ್ಲ. ಪಂಚನಾಮೆಯನ್ನು ಅಪಘಾತ ಆದ ಮಾರನೇ ದಿನ ಮಾಡಿರುತ್ತಾರೆ. ಪಂಚನಾಮೆಗೆ ನಾನು, ಚಾಸಾ-5, 6 ಮತ್ತು ಚಾಸಾ-10 ಮತ್ತು ಮಂಜುಳಾ ಇದ್ದೆವು. ನನ್ನ ಮಗ ಎಂಬುದನ್ನು ತೋರಿಸಲು ಸಾಕ್ಷಿ ಬೇಕು ಎಂದು ಹೇಳಿದ್ದರು ಅದಕ್ಕಾಗಿ ನಾನು ಇವರುಗಳನ್ನು ಕರೆದುಕೊಂಡು ಬಂದಿದ್ದೆ. ಪೊಲೀಸರು ಅವರುಗಳಿಗೆ ಬರಲು ಹೇಳಿರಲಿಲ್ಲ.

ಪಂಚನಾಮೆ ಮಾಡಲು ನಾನು ಪೋಲೀಸ್ ಠಾಣೆಗೆ ಬಂದಿದ್ದೆ. ಸಂಜೆ 5 ಗಂಟೆಗೆ ಅ ದಿನ ಸ್ಥಳಕ್ಕೆ ಹೋಗಿರುತ್ತೇವೆ. ಪಂಚನಾಮೆಯ ಸಮಯದಲ್ಲಿ 2-3 ಜನ ಪೊಲೀಸರು ಇದ್ದರು. ಪೊಲೀಸರು ಅಪಘಾತವಾದ ಸ್ಥಳದಲ್ಲಿ ನಮ್ಮನ್ನೆಲ್ಲಾ ನಿಲ್ಲಿಸಿ ಪೊಟೋ ತೆಗೆದರು. ಘಟನಾ ಸ್ಥಳವನ್ನು ಪೊಲೀಸರು ನನಗೆ ತೋರಿಸಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ಪೊಲೀಸರು ಏನು ಬರವಣಿಗೆ ಮಾಡಿದರು ಎಂದು ನಾನು ಒದಿ ನೋಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಓದಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಪಂಚನಾಮೆಗೆ ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದಲ್ಲಿ ರಕ್ತದ ಕಲೆಗಳು ಹಾಗೂ ಚೂರಾದ ಬೈಕಿನ ಪೀಸುಗಳಿದ್ದವು. ಸದರಿ ಚೂರುಗಳನ್ನು ನಾನು ಪೊಲೀಸರಿಗೆ ಕೊಟ್ಟಿರುವುದಿಲ್ಲ. ಪೊಲೀಸರು ತೆಗೆದುಕೊಂಡಿರಬಹುದು.

ಮಹಜರ್ ಜಾಗದ ಪೂರ್ವ ಪಶ್ಚಿಮ ಹೇಳಲು ಆಗವುದಿಲ್ಲ. ಪಂಚನಾಮೆ ಸಮಯದಲ್ಲಿ ವಾಹನಗಳು ಓಡಾಡುತ್ತಿದ್ದವು ಅವುಗಳನ್ನು ನಿಲ್ಲಿಸಿ ಪೊಲೀಸರು ಪಂಚರಾಗಿ ಬರುವಂತೆ ಕೇಳಿಕೊಂಡಿರುವುದಿಲ್ಲ. ಪೊಲೀಸರು ಅಪಘಾತ ಆದ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ಮಾಡಿರುತ್ತಾರೆ ನಾನು ಅದಕ್ಕೆ ಸಹಿಯನ್ನು ಹಕಿರಬಹುದು. ಪಂಚನಾಮೆಗೆ ಹೊದಲ್ಲಿ ನಾನು ಎಷ್ಟು ಸಹಿ ಹಾಕಿದ್ದೇನೆ ಎಂದು ನನಗೆ ನೆನಪಿರುವುದಿಲ್ಲ.

ನನ್ನ ಮಗನ ಬೈಕ್‌ನ ಎದುರುಭಾಗ ಜಖಂ ಆಗಿತ್ತು. ಬೈಕಿನ ಪಂಚನಾಮೆಗೆ ನಾನು, ಚಾಸಾ-5, 6 ಮತ್ತು ಚಾಸಾ-10 ಮತ್ತು ಮಂಜುಳಾ ಇದ್ದೆವು. ಮೊದಲು ಪೋಲೀಸ್ ಠಾಣೆಯಲ್ಲಿ ಬೈಕಿನ ಪಂಚನಾಮೆ ಮುಗಿಸಿಕೊಂಡು ಅನಂತರ ಘಟನಾ ಸ್ಥಳಕ್ಕೆ ಬಂದಿರುತ್ತೇವೆ. ಬೈಕಿನ ಪಂಚನಾಮೆಗೆ ಬರುಲು ಪೊಲೀಸರು ನೋಟಿಸನ್ನು ನೀಡಿರುವುದಿಲ್ಲ ಪೋನ್ ಮಾಡಿರುತ್ತಾರೆ. ಅಪಘಾತ ಆದ ವಾಹನವನ್ನು ಪೊಲೀಸರೇ

ಠಾಣೆಯಲ್ಲಿ ಇಟ್ಟಿದ್ದರು. ಅಪಘಾತ ಪಡಿಸಿದ ಬೈಕ್ ಯಾವ ನಂಬರ್ ಹಾಗೂ ಮಾದರಿಯದ್ದು ಎಂದು ಹೇಳಲು ಆಗುವುದಿಲ್ಲ. ಬೈಕ್ ಪಂಚನಾಮೆಗೆ ನಾನು ಸಹಿಯನ್ನು ಹಾಕಿರುತ್ತೇನೆ ಆದರೆ ಎಷ್ಟು ಸಹಿ ಎಂದು ಈಗ ಹೇಳಲು ಆಗುವುದಿಲ್ಲ. ಬೈಕ್ ಪಂಚನಾಮೆಯ ಚೆಕ್ಕುಬಂದಿ ಈಗ ಹೇಳಲು ಆಗುವುದಿಲ್ಲ. ಅಪಘಾತ ಪಡಿಸಿದರು ಎನ್ನಲಾದ ಆರೋಪಿಯನ್ನು ಪೊಲೀಸರೇ ನನಗೆ ತೋರಿಸಿರುತ್ತಾರೆ. ಪೊಲೀಸರು ಆರೋಪಿಯನ್ನು ತೋರಿಸಿದ್ದು ಹೊರತುಪಡಿಸಿ ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ಚಾಸಾ-2 ರವರು ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ.

ಪೊಲೀಸರು ಯಾವುದೇ ಸ್ಥಳ ಪಂಚನಾಮೆಯನ್ನು, ಬೈಕ್ ಪಚಂನಾಮಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಪರಿಹಾರ ಪಡೆಯುವ ಉದ್ದೇಶದಿಂದ ಆರೋಪಿಯಾವ ತಪ್ಪನ್ನೂ ಮಾಡದೇ ಇದ್ದರೂ ಆರೋಪಿ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತಿತದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.